ದಿನಾಂಕಃ 19.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀ. ಕೆ.ವಿ.ಪಿ ವಕೀಲರಿಂದ ಪ್ರತಿವಾದಿ ಪರ

ನಿಪಿಃ18 ರಿಂದ ನಿಪಿಃ29 ರ ದಾಖಲೆಗಳಲ್ಲಿ ವಿಸ್ತೀರ್ಣ ನಮೂದಾಗಿರುವುದಿಲ್ಲ ಎಂದರೆ ಸರಿ. ನಿಪಿಃ 1 ರ 1992 ನೇ ಇಸವಿಯಿಂದ 2016-17 ನೇ ಇಸವಿವರೆಗೂ ನನ್ನ ಹೆಸರಿಗೆ ಡಿಮ್ಯಾಂಡ್ ರಿಜಿಸ್ಟರ್ ಪ್ರತಿ ಇರುವುದಿಲ್ಲ ಎಂದರೆ ಸರಿ. ದಾವೆ ಸಲ್ಲಿಸುವ ಸಲುವಾಗಿ ನಾನು 2017 ರಿಂದ ಅಸೆಸಮೆಂಟ್ ಡಿಮ್ಯಾಂಡ್ ರಿಜಿಸ್ಟ್ರರ ಎಕ್ಸಟ್ರಾಕ್ಟ ಪ್ರತಿಯನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ 25 ವರುಷಗಳ ಕಾಲ ಯಾವ ಕಾರಣಕ್ಕೆ ಅಸೆಸಮಂಟ್ ಡಿಮ್ಯಾಂಡ್ ರಿಜಿಸ್ಟರ್ ಎಕ್ಸಟ್ರಾಕ್ಟ್‌ನಲ್ಲಿ ನನ್ನ ಹೆಸರು ನಮೂದು ಮಾಡಿಸಿಲ್ಲ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲದ ಕಾರಣ ಮಾಡಿಸಿರುವುದಿಲ್ಲ ಎನ್ನುವರು. ನಿಪಿ-18 ರಿಂದ ನಿಪಿ29 ದಾಖಲೆಗಳಲ್ಲಿ ಅಕ್ಕ ಪಕ್ಕದ ನಿವೇಶನಗಳಿಗೆ ಸಂಬಂದಪಟ್ಟಂತೆ ಕ್ರ. ಸಂ ಇರುತ್ತದೆ ಎಂದರೆ ಗೊತ್ತಿಲ್ಲ. ನನ್ನ ನಿವೇಶನ ಪಕ್ಕ ಎಂ.ಹೆಚ್ ಮಹೇಶ್ವರಪ್ಪ ಮತ್ತು ವೇದಾಂತಪ್ಪ ಗೌಡ ರವರ ನಿವೇಶನ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ವಾದಪತ್ರದ ಚೆಕ್ ಬಂಧಿಯಲಿ ದಕ್ಷಿಣದ ಕಡೆಗೆ 3 ನೇ ಪ್ರತಿವಾದಿಯ ಅಜ್ಜ ಚಿನ್ನಭೋವಿ ಎಂದು ತೋರಿಸಿರುತ್ತೇನೆ ಎಂದರೆ ಸರಿ. ನ್ಯಾಯಾಲಯಕ್ಕ ಹಾಜರುಪಡಿಸಿರುವ ನಿಪಿ-18 ರಿಂದ ನಿಪಿ-29 ದಾಖಲೆಗಳು ದಾವಾಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ.ಸದರಿ ದಾಹಲೆಗಳು ನನಗೆ ಸೇರಿದ ಬೇರೆ ಯಾವುದೋ ನಿವೇಶನಕ್ಕೆ ಸಂಬಂಧಪಟ್ಟಿರುತ್ತದೆಎಂದರೆ ಸರಿಯಲ್ಲ. ನಿಪಿ-8 ಮತ್ತು 17 ರಲ್ಲಿ ದಕ್ಷಿಣದ ಕಡೆಗೆ ಚಿನ್ನಾಭೋವಿ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನಿಪಿ-18 ರಿಂದ ನಿಪಿ29 ರ ದಾಖಲೆಗಳನ್ನು ನನ್ನ ಅಕ್ಕ ಪಕ್ಕ ಚಿನ್ನಾ ಭೋವಿ ರವರ ನಿವೇಶನ ಸಂಖ್ಯೆ ಕಂಡು ಬರುತ್ತಿಲ್ಲ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುವರು. ಸದರಿ ನಿಪಿ-18 ರಿಂದ ನಿಪಿ29 ದಾಖಲೆಗಳು ಸಾಬೀತುಪಡಿಸಲು ಪಿಡಿಓ ರವರ ವಿಚಾರಣೆ ಮಾಡಲು ತೊಂದರೆ ಇರುವುದಿಲ್ಲ ಎಂದರೆ ಸರಿ.

ನಾನು ಹಾಜರುಪಡಿಸಿರುವ ದಾಖಲೆಗಳು ದಾವಾಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಮತ್ತು ಅದರಲ್ಲಿ ನನಗೆ ಯಾವುದೇ ಹಕ್ಕು ಸಾಬೀತಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ-18 ರಿಂದ ನಿಪಿ29 ರ ದಾಖಲೆಗಳ ಮೇರೆಗೆ ನಮೂನೆ 9 ಮತ್ತು 11 ನ್ನು ದಾಖಲೆಗಳನ್ನು ಪಡೆದಿದ್ದೀರಾ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲ ಎಂದು ಹೇಳುವರು.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ